ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 11-12-1991.

# *ಸತ್ಯತೆಯ ಸಭ್ಯತೆಯೇ ಸತ್ಯವಾದ ಘನತೆಯಾಗಿದೆ(ರಾಯಲ್ಟಿ)*

(सत्यता की सभ्यता ही रीयल रॉयल्टी है)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅವ್ಯಕ್ತ ಬಾಪ್‌ದಾದಾ ತನ್ನ ಸತ್ಯವಾದ ಮತ್ತು ಉನ್ನತವಾದ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾ ತಮ್ಮ ಶ್ರೇಷ್ಠ ಅರ್ಥಾತ್ ರಾಯಲ್ ಪರಿವಾರವನ್ನು ನೋಡುತ್ತಿದ್ದಾರೆ. ಇಡೀ ಕಲ್ಪದಲ್ಲಿ ಎಲ್ಲರಿಗಿಂತ ರಾಯಲ್ ವ್ಯಕ್ತಿಗಳೆಂದರೆ ತಾವು ಶ್ರೇಷ್ಠಾತ್ಮರೇ ಆಗಿದ್ದೀರಿ. ಅನಾದಿ ಅತ್ಮಿಕ ಸ್ವರೂಪದಲ್ಲಿಯೂ ಎಲ್ಲರಿಗಿಂತ ಶ್ರೇಷ್ಠ ರಾಯಲ್ ಆತ್ಮರಾಗಿದ್ದೀರಿ ಮತ್ತು ಆದಿಸ್ವರೂಪ ದೇವತಾ ರೂಪದಲ್ಲಿಯೂ ಉನ್ನತ ರಾಜ್ಯಾಧಿಕಾರಿಗಳು ಮತ್ತು ಉನ್ನತ ಕುಟುಂಬೀಕರು. ಪೂಜ್ಯರೂಪದಲ್ಲಿಯೂ ತಾವು ದೇವಾತ್ಮರಿಗೆ ಎಷ್ಟೊಂದು ಘನತೆಯಿಂದ ಪೂಜೆಯಾಗುತ್ತಾ ಇರುತ್ತದೆ. ಮತ್ತಾವ ಅನ್ಯಧರ್ಮಾತ್ಮರು ಅಥವಾ ರಾಜನೀತಿ ಆತ್ಮರಿಗೆ ಇಂತಹ ರಾಯಲ್ ಪೂಜೆಯು ನಡೆಯುವುದಿಲ್ಲ. ಅಂದಮೇಲೆ ಮೂರೂ ರೂಪಗಳಲ್ಲಿ - ಅನಾದಿ, ಆದಿ ಮತ್ತು ಪೂಜ್ಯಸ್ವರೂಪರು, ಇಂತಹ ರಾಯಲ್ ವ್ಯಕ್ತಿಗಳು ಮತ್ತಾರೂ ಇಲ್ಲ ಏಕೆಂದರೆ ತಾವಾತ್ಮರದು ಪವಿತ್ರತೆಯದೇ ಘನಃತೆಯಾಗಿದೆ. ಇಂತಹ ಸಂಪೂರ್ಣ ಪವಿತ್ರ ಆತ್ಮರು ಇಡೀ ಕಲ್ಪದಲ್ಲಿ ಮತ್ತಾರೂ ಆಗಿಲ್ಲ. ಮುಂದೆ ಆಗುವುದೂ ಇಲ್ಲ. ಇದು ಪವಿತ್ರತೆಯದೇ ವಿಶೇಷತೆಯಾಗಿದೆ. ಆದ್ದರಿಂದ ಕೇವಲ ದೇವಾತ್ಮರ ಮುಂದೆಯೇ ಈ ಮಹಿಮೆಯನ್ನು ಹಾಡುತ್ತಾರೆ- ತಾವು ಸಂಪೂರ್ಣ ನಿರ್ವಿಕಾರಿಯಾಗಿದ್ದೀರಿ ಎಂದು. ಮತ್ತ್ಯಾವುದೇ ಧರ್ಮಾತ್ಮರ ಮಹಿಮೆಯಲ್ಲಿ ಈ ರೀತಿ ಹಾಡಲಾಗುವುದಿಲ್ಲ. ಕೇವಲ ದೇವಾತ್ಮರ ಶ್ರೇಷ್ಠಕೀರ್ತಿ ಅರ್ಥಾತ್ ಶ್ರೇಷ್ಠ ಪವಿತ್ರತೆಯದೇ ಕೀರ್ತನೆಯಾಗುತ್ತದೆ. ಮತ್ತಾವುದೇ ಧರ್ಮದಲ್ಲಿ ಕೀರ್ತನೆಯಾಗುವುದಿಲ್ಲ. ಮಧುರ ಸಂಗೀತಗಳಿಂದ ಕೀರ್ತನೆ ಮಾಡುವ ಪದ್ಧತಿಯು ದೇವಾತ್ಮರಲ್ಲಿಯೇ ಇದೆ ಹಾಗೂ ಸಂಗಮಯುಗದ ಶಕ್ತಿರೂಪರಲ್ಲಿದೆ. ಇದು ಸಂಪೂರ್ಣ ಪವಿತ್ರತೆಯ ವಿಧಿಯ ಸಿದ್ಧಿಯಾಗಿದೆ. ಆದ್ದರಿಂದ ತಮ್ಮಂತಹ ಆತ್ಮಿಕ ಘನತೆಯು ಮತ್ಯಾವ ಆತ್ಮರಿಗೂ ಇಲ್ಲ ಅಂದಮೇಲೆ ಪರಿಶೀಲನೆ ಮಾಡಿಕೊಳ್ಳಿರಿ- ಇಂತಹ ಪವಿತ್ರತೆಯ ಘನತೆಯು ನಮ್ಮಲ್ಲಿ

ಎಲ್ಲಿಯವರೆಗೆ ಬಂದಿದೆ? ಆತ್ಮಿಕ ಘನತೆಯು ಎಲ್ಲದಕ್ಕಿಂತ ಶ್ರೇಷ್ಠ ಚಿಹ್ನೆಯಾಗಿದೆ-ರಾಯಲ್ಟಿ(ರಾಜಸ) ಅರ್ಥಾತ್ ರಿಯಾಲಿಟಿ ಅಂದರೆ ಸತ್ಯತೆ. ಹೇಗೆ ಅತ್ಮನ ಅನಾದಿ ಸ್ವರೂಪವು ಸತ್ಯಸ್ವರೂಪವಾಗಿದೆ. ಸತ್ ಅರ್ಥಾತ್ ಅವಿನಾಶಿ ಮತ್ತು ಸತ್ಯವೆಂದಾಗಿದೆ. ಹೇಗೆ ತಂದೆಯ ಮಹಿಮೆಯಲ್ಲಿ ವಿಶೇಷವಾಗಿ ಇದನ್ನೇ ಹಾಡುತ್ತಿರುತ್ತಾರೆ- ಸತ್ಯಂ ಶಿವಂ ಸುಂದರಂ, ಸತ್ಯವೇ ಶಿವನಾಗಿದ್ದಾರೆ ಅಥವಾ ಗಾಡ್ ಈಜ್ ಟ್ರುಥ್ ಎಂದು ಹೇಳಲಾಗುತ್ತದೆ ಅಂದಾಗ ತಂದೆಯ ಮಹಿಮೆಯು ಸತ್ಯ ಅರ್ಥಾತ್ ಸತ್ಯತೆಯದಾಗಿದೆ. ಇಂತಹ ರಾಯಲ್ಟಿ ಮತ್ತು ರಿಯಾಲಿಟಿ-ಸತ್ಯತೆಯು ಸ್ವಲ್ಪವೂ ಕಾಲ್ಪನಿಕ ಅಥವಾ ಬೆರಕೆಯಾಗಿದಿರಲಿ. ಮಾತಿನಲ್ಲಿರಲಿ, ಕರ್ಮದಲ್ಲಿರಲಿ ಸಂಬಂಧ-ಸಂಪರ್ಕದಲ್ಲಿರಲಿ ಅಸತ್ಯವು ಬೆರಕೆಯಾಗಬಾರದು. ಇದಕ್ಕೆ ಸಾಧಾರಣ ಭಾಷೆಯಲ್ಲಿ ಬಾಪ್‌ದಾದಾ ಸತ್ಯತೆಯೆಂದು ಹೇಳುತ್ತಾರೆ. ರಾಯಲ್ ಆತ್ಮರ ವೃತ್ತಿ, ದೃಷ್ಟಿ, ಮಾತು ಮತ್ತು ಚಲನೆ ಎಲ್ಲವೂ ಸತ್ಯವಾಗಿರುವುದು. ವೃತ್ತಿಯಲ್ಲಿ ಒಂದು, ಮಾತಿನಲ್ಲಿ ಮತ್ತೊಂದು ತೋರಿಕೆ ಭಾವವು ಇರಬಾರದು. ಇದ್ದರೆ ರಾಯಲ್ಟಿ ಅಥವಾ ರಿಯಾಲಿಟಿ ಎಂದು ಹೇಳುವುದಿಲ್ಲ.

ಇತ್ತೀಚೆಗೆ ಬಾಪ್ ದಾದಾ ಮಕ್ಕಳ ಲೀಲೆಯನ್ನು ನೋಡುತ್ತೇವೆ ಮತ್ತು ಕೇಳುತ್ತಲೂ ಇರುತ್ತೇವೆ. ಕೆಲವು ಮಕ್ಕಳು ಮಾತನ್ನು ಸೇರಿಸುವುದರಲ್ಲಿ ಮತ್ತು ಮಾತನ್ನು ಕಟ್ಟುವುದರಲ್ಲಿ ಬಹಳ ಬುದ್ಧಿವಂತರಾಗಿದ್ದಾರೆ ಏಕೆಂದರೆ ದ್ವಾಪರದಿಂದ ಕಟ್ಟುಕಥೆಗಳು ಹಾಗೂ ಕಾಲ್ಪನಿಕ ಕಥೆಗಳು ಬಹಳ ಕೇಳಿದ್ದಾರೆ. ಆದ್ದರಿಂದ ಈ ಬ್ರಾಹ್ಮಣ ಜೀವನದಲ್ಲಿಯೂ ಆ ಸಂಸ್ಕಾರವನ್ನು ಇಮರ್ಜ್ ಮಾಡಿಕೊಂಡು ಬಿಡುತ್ತಾರೆ. ಇಷ್ಟು ಚೆನ್ನಾಗಿ ಮಾತನ್ನು ಕಟ್ಟುತ್ತಾರೆ. **ಅಸತ್ಯ ಮಾತನ್ನೂ ಸಹ ಸಂಪೂರ್ಣ ಸತ್ಯವೆನ್ನುವಂತೆ ಮಾಡಿಬಿಡುತ್ತಾರೆ ಮತ್ತು ಸತ್ಯವನ್ನು ಅಸತ್ಯವೆಂದು ಸಿದ್ಧತೆ ಮಾಡಿಬಿಡುತ್ತಾರೆ. ಒಳಗೊಂದು ಹೊರಗೊಂದು ಎಂದು ಇದಕ್ಕೇ ಹೇಳಲಾಗುತ್ತದೆ.** ಅಂದಮೇಲೆ ಇದು ಸತ್ಯತೆಯಾಯಿತೇ? ಘನತೆಯಾಯಿತೇ? ಇಲ್ಲ ತಾನೇ! ಆದ್ದರಿಂದ ಪವಿತ್ರತೆಯ ರಾಯಲ್ಟಿ ಅರ್ಥಾತ್ ರಿಯಾಲಿಟಿ. ಇದು ರಾಯಲ್ಟಿಯ ಚಿಹ್ನೆಯಾಗಿದೆ. ಒಂದುವೇಳೆ ಈ ಚಿಹ್ನೆ ಇಲ್ಲವೆಂದರೆ ತಿಳಿದುಕೊಳ್ಳಿರಿ, ಪವಿತ್ರತೆಯ ಘನತೆಯು ಇನ್ನೂ ಬಂದಿಲ್ಲ ಅಥವಾ ಪರ್ಸೆಂಟೇಜ್‌ನಲ್ಲಿ ಬಂದಿದೆ ಸಂಪೂರ್ಣವಾಗಿಲ್ಲ ಎಂದರ್ಥ.

ಸತ್ಯತೆಯ ಇನ್ನೊಂದು ಚಿಹ್ನೆಯನ್ನು ಬಾಪ್‌ದಾದಾ ಸದಾ ತಿಳಿಸುತ್ತಲೇ ಇರುತ್ತಾರೆ- ಸದಾ ಸತ್ಯವಂತರು ನರ್ತಿಸುವರು. ಸತ್ಯ ಆತ್ಮರು ಖುಷಿಯಲ್ಲಿ ನರ್ತಿಸುತ್ತಾ ಇರುತ್ತಾರೆ. ಕೆಲವೊಮ್ಮೆ ಖುಷಿ ಕಡಿಮೆ. ಕೆಲವೊಮ್ಮೆ ಖುಷಿ ಹೆಚ್ಚು- ಈ ರೀತಿ ಇರುವುದಿಲ್ಲ. ದಿನ-ಪ್ರತಿದಿನ, ಪ್ರತೀ ಸಮಯ ಖುಷಿಯು ಮತ್ತಷ್ಟು ಹೆಚ್ಚುತ್ತಾ ಇರುತ್ತದೆ. ಸತ್ಯತೆಯ ಚಿಹ್ನೆಯಾಗಿದೆ- ಸದಾ ಖುಷಿಯಲ್ಲಿ ನರ್ತಿಸುವುದು. ಹಾವಭಾವ ಎಂದು ಹೇಳುತ್ತೀರಲ್ಲವೆ, ಘನತೆಯ ಅರ್ಥವೂ ಆಗಿದೆ- ಚಿತ್ತದಿಂದಲೂ ಹಾಗೂ ಹಾವಭಾವದಿಂದಲೂ ಸದಾ ಹರ್ಷಿತರಾಗಿರುವುದು. ಕೇವಲ ಹೊರಗಿನಿಂದ ಹರ್ಷಿತಮುಖವಲ್ಲ ಆದರೆ ಚಿತ್ತದಲ್ಲಿಯೂ ಹರ್ಷಿತವಾಗಿರಬೇಕು. ಹರ್ಷಿತಚಿತ್ತ, ಹರ್ಷಿತಮುಖ, ಎರಡೂ ಹರ್ಷಿತವಾಗಿರಲಿ. ಕೆಲವೊಮ್ಮೆ ಈ ರೀತಿಯೂ ಆಗುತ್ತದೆ- ಒಳಗೆ ಚಿತ್ತದಲ್ಲಿ ಖುಷಿಯಿರುವುದಿಲ್ಲ ಆದರೆ ಬಾಹರ್ಮುಖತೆಯಲ್ಲಿ ಸಮಯ ಪ್ರಮಾಣ ಮುಖವನ್ನು ಖುಷಿಯಾಗಿಟ್ಟುಕೊಂಡು ತೋರಿಸುತ್ತಾರೆ. ಇದಕ್ಕೆ ಅಲ್ಪಕಾಲದ ಹರ್ಷಿತ ಮುಖವೆಂದು ಹೇಳಲಾಗುತ್ತದೆ ಆದರೆ ಹರ್ಷಿತಚಿತ್ತ, ಹರ್ಷಿತಮುಖವು ಅವಿನಾಶಿಯಾಗಿರುವುದಿಲ್ಲ. ಪವಿತ್ರತೆಯ ರಿಯಾಲಿಟಿ, ರಾಯಲ್ಟಿ ಅರ್ಥಾತ್ ಅವಿನಾಶಿಚಿತ್ತ ಮತ್ತು ಮುಖವು ಹರ್ಷಿತವಾಗಿರಲಿ. ಪರಿಶೀಲನೆ ಮಾಡಿಕೊಳ್ಳಿರಿ- ಅನ್ಯರನ್ನು ಪರಿಶೀಲಿಸುವುದರಲ್ಲಿ ತೊಡಗಬೇಡಿರಿ. ತಮ್ಮನ್ನು ಪರಿಶೀಲಿಸಿಕೊಳ್ಳಿರಿ. ಇಂತಹ ರಾಯಲ್ ಆತ್ಮರು ಬಾಪ್ ದಾದಾರವರಿಗೆ ಮತ್ತು ಸರ್ವಬ್ರಾಹ್ಮಣ ಪರಿವಾರದವರಿಗೆ ಅತೀಪ್ರಿಯರೆನಿಸುತ್ತಾರೆ. ರಿಯಲ್ ಪ್ರಿಯವಾದ ಆತ್ಮರ ವಿಶೇಷತೆ ಏನಿರುತ್ತದೆ? ಏಕೆಂದರೆ ಈಗಿನ ರೀತಿ-ನೀತಿಗಳ ಪ್ರಮಾಣ ಯಾರಾದರೂ ಪ್ರಿಯರೆನಿಸುತ್ತಾರೆಂದರೆ ಆ ಪ್ರೀಯರಾದವರಕಡೆ ಬಯಸದಿದ್ದರೂ ಆಕರ್ಷಿತರಾಗಿಬಿಡುತ್ತಾರೆ ಯಾವುದನ್ನು ತಾವು ತಮ್ಮ ಭಾಷೆಯಲ್ಲಿ ಅಟ್ಯಾಚ್‌ಮೆಂಟ್ ಎಂದು ಹೇಳುತ್ತೀರಿ ಏಕೆಂದರೆ ಪ್ರಿಯರಾಗಿದ್ದರೆ ಅಟ್ಯಾಂಚ್‌ಮೆಂಟ್ ಇರುತ್ತದೆಯಲ್ಲವೆ. ಆದರೆ ರಿಯಲ್ ಮತ್ತು ರಾಯಲ್ ಪ್ರೀತಿಯ ಚಿಹ್ನೆಯೇನೆಂದರೆ ಅವರು ಎಷ್ಟು ಪ್ರಿಯರಾಗಿರುವರೋ ಅಷ್ಟೇ ಅತೀತರೂ ಆಗಿರುವರು. ಆದ್ದರಿಂದ ಅವರು ಸ್ವಯಂ ಅಧಿಕ ಅಟ್ಯಾಚ್ಮೆಂಟ್‌ನಲ್ಲಿ ಬರುವುದಿಲ್ಲ ಮತ್ತು

ಅನ್ಯರೂ ಅವರ ಅಟ್ಯಾಚ್‌ಮೆಂಟ್‌ನಲ್ಲಿ ಬರುವುದಿಲ್ಲ. ಇದಕ್ಕೆ ರಿಯಲ್ ಪ್ರೀತಿ, ಸಂಪೂರ್ಣ ಪ್ರೀತಿಯೆಂದು ಹೇಳಲಾಗುತ್ತದೆ. ಅವರು ಹರ್ಷಿತವಾಗಿರುವರು, ಆಕರ್ಷಿತರೂ ಆಗಿರುವರು ಆದರೆ ಹದ್ದಿನ ಆಕರ್ಷಣೆ ಮಾಡುವವರಲ್ಲ ಅಂದಮೇಲೆ ರಿಯಲ್ ಮತ್ತು ರಾಯಲ್ ಆತ್ಮರ ಚಿಹ್ನೆಯೇನಾಯಿತು? ಅತಿಪ್ರಿಯ, ಅತೀತ, ರಾಯಲ್ಟಿಯ ಇನ್ನೂ ವಿಶೇಷತೆಯಿದೆ. ರಾಯಲ್ ಆತ್ಮರಲ್ಲಿ ಎಂದೂ ಯಾವುದೇ ಪ್ರಕಾರದ ಸ್ಥೂಲವಿರಲಿ. ಸೂಕ್ಷ್ಮ ವಿರಲಿ ಬೇಡುವ ಸಂಸ್ಕಾರವಿರುವುದಿಲ್ಲ ಏಕೆಂದರೆ ರಾಯಲ್ ಅತ್ಮರು ಸದಾ ಸಂಪನ್ನವಾಗಿರುತ್ತಾರೆ. ಒಂದು ಸಂಪನ್ನತೆಯಾಗಿದೆ- ಸ್ಥೂಲವಸ್ತುಗಳಿಂದ ಸ್ಥೂಲಸಾಧನಗಳಿಂದ ಹೊರಗಿನ ಸಂಪನ್ನತೆ ಮತ್ತು ಇನ್ನೊಂದು ಸಂಪನ್ನತೆಯಾಗಿದೆ- ಮನಸ್ಸಿನ ಸಂಪನ್ನತೆ ಯಾರು ಮನಸ್ಸಿನಿಂದ ಸಂಪನ್ನರಾಗಿರುವರೋ ಅವರಬಳಿ ಸ್ಥೂಲವಸ್ತು ಹಾಗೂ ಸಾಧನಗಳು ಇಲ್ಲದಿದ್ದರೂ ಸಹ ಮನಸ್ಸು ಸಂಪನ್ನವಾಗಿರುವ ಕಾರಣ ಅವರು ಎಂದಿಗೂ ತಮ್ಮಲ್ಲಿ ಕೊರತೆಯ ಅನುಭವ ಮಾಡುವುದಿಲ್ಲ. ಇಲ್ಲ ಎಂಬುದರಲ್ಲಿಯೂ ಹೌದು ಎಂಬ ಅನುಭವ ಮಾಡುವರು ಮತ್ತು ಯಾರ ಮನಸ್ಸು ಸಂಪನ್ನವಾಗಿರುವುದಿಲ್ಲವೋ ಅಂತಹ ಅತ್ಮರು ಹೊರಗಿನಿಂದ ಎಷ್ಟೇ ವಸ್ತು ಮತ್ತು ಸಾಧನಗಳಿಂದ ಸಂಪನ್ನವಾಗಿದ್ದರೂ ಸಹ ಅವರೆಂದಿಗೂ ತಮ್ಮನ್ನು ಸಂಪನ್ನರೆಂದು ತಿಳಿದುಕೊಳ್ಳುವುದಿಲ್ಲ. ಇಂತಹ ಆತ್ಮರು ಸದಾ ಇಚ್ಛೆಯ ಕಾರಣ 'ಬೇಕು-ಬೇಕು' ಎಂಬ ಗೀತೆಯನ್ನೇ ಹಾಡುತ್ತಿರುತ್ತಾರೆ. ಪ್ರತೀ ಮಾತಿನಲ್ಲಿ ಇದು ಆಗಬೇಕು, ಇದನ್ನು ಮಾಡಬೇಕು. ಇದು ಸಿಗಬೇಕು. ಇವರು ಬದಲಾಗಬೇಕು..... ಪ್ರತೀ ಸಮಯ ಇದೇ ಗೀತೆಯನ್ನು ಹಾಡುತ್ತಾ ಇರುತ್ತಾರೆ ಆದರೆ ಮನಸ್ಸಿನಿಂದ ಸಂಪನ್ನರಾಗಿರುವ ಆತ್ಮರು ಸದಾ ಇದೇ ಗೀತೆಯನ್ನು ಹಾಡುತ್ತಾರೆ- ಎಲ್ಲವನ್ನೂ ಪಡೆದುಬಿಟ್ಟೆವು ಪ್ರಾಪ್ತಿಯಾಗಿಬಿಟ್ಟಿತು. ಇದಾಗಬೇಕು. ಇದನ್ನು ಮಾಡಬೇಕು. ಈ ಬೇಕು-ಬೇಕು ಎಂಬುದೂ ಸಹ ರಾಯಲ್ ಬೇಡುವ ಸಂಸ್ಕಾರವಾಗಿದೆ. ಬೇಹದ್ದಿನ ಸೇವೆಯಪ್ರತಿ ಇದಾಗಬೇಕು. ಇದನ್ನು ಮಾಡಬೇಕು ಎಂದು ಆಲೋಚಿಸುವುದು ಬೇರೆಮಾತಾಗಿದೆ ಆದರೆ ಸ್ವಯಂನ ಹದ್ದಿನ ಪ್ರಾಪ್ತಿಯ ಅರ್ಥವಾಗಿ ಬೇಕು-ಬೇಕು ಎಂಬುದು ರಾಯಲ್ ಭಿಕ್ಷೆ ಬೇಡುವುದಾಗಿದೆ. ಹೆಸರೂ ಬೇಕು, ಕೀರ್ತಿಯೂ ಬೇಕು. ಮಾನ್ಯತೆಯೂ ಬೇಕು. ಪ್ರೀತಿಯೂ ಬೇಕು. ಯಾರಾದರೂ ಕೇಳುವವರು ಬೇಕು, ಇವೆಲ್ಲವೂ ಹದ್ದಿನ ಮಾತುಗಳಾಗಿವೆ. ರಾಯಲ್ ಆತ್ಮರಲ್ಲಿ ಬೇಡುವ ಸಂಸ್ಕಾರವು ಅಂಶಮಾತ್ರವೂ ಇರುವುದಿಲ್ಲ. ರಾಯಲ್ಟಿ ಎಂದರೆ ಏನೆಂಬುದು ಅರ್ಥವಾಯಿತೇ?

ತಪಸ್ಸಿನ ಚಾರ್ಟ್‌ನಲ್ಲಿ ಎಲ್ಲರೂ ಇದನ್ನು ಪರಿಶೀಲನೆ ಮಾಡಿಕೊಳ್ಳಿರಿ- ನಾನು ಯಾರಿಗೂ ಅವಹೇಳನೆ ಮಾಡಲಿಲ್ಲವೇ? ಕ್ರೋಧ ಮಾಡಲಿಲ್ಲವೇ? ಎಂದು ಕೇವಲ ಈ ಮಾತುಗಳನ್ನು ಪರಿಶೀಲನೆ ಮಾಡಿಕೊಳ್ಳುವುದಲ್ಲ ಮತ್ತು ಬಹುಮಾನ ತೆಗೆದುಕೊಳ್ಳುವುದಲ್ಲ. ತಪಸ್ಸಿನ ಅರ್ಥವೇ ಆಗಿದೆ- ಸಂಪೂರ್ಣ ಪವಿತ್ರರಾಗುವುದು ಆದ್ದರಿಂದ ಪವಿತ್ರತೆಯ ವ್ಯಕ್ತಿತ್ವ, ಪವಿತ್ರತೆಯ ಘನತೆಯು ಎಲ್ಲಿಯವರೆಗೆ ಪ್ರತ್ಯಕ್ಷದಲ್ಲಿ ಬಂದಿದೆ ಎಂಬುದನ್ನು ಪರಿಶೀಲನೆ ಮಾಡಿಕೊಳ್ಳಬೇಕಾಗಿದೆ. ಅಂತಹವರಿಗೆ ಕಪಸ್ವೀರಾಜರೆಂದು ಹೇಳಲಾಗುವುದು. ರಾಯಲ್ಟಿ ಎಂದರೆ ಏನೆಂದು ತಿಳಿಯಿತೇ?

**ರಾಯಲ್ ಆತ್ಮನ ಚಲನೆ ಮತ್ತು ಚಹರೆ ಎರಡೂ ಸಹ ಸತ್ಯತೆಯ ಸಭ್ಯತೆಯ ಅನುಭವ ಮಾಡಿಸುತ್ತದೆ. ವಾಸ್ತವದಲ್ಲಿ ರಾಯಲ್ ಆತ್ಮರಿಗೆ ಸಭ್ಯತೆಯ ದೇವಿ ಎಂದು ಕರೆಯಲಾಗುತ್ತದೆ. ಅವರ ಮಾತು, ನೋಟ, ಚಲನೆ, ಆಹಾರ-ಪಾನೀಯಗಳು, ಏಳುವುದು-ಕುಳಿತುಕೊಳ್ಳುವುದು- ಪ್ರತೀಕರ್ಮದಲ್ಲಿ ಸಭ್ಯತೆ, ಸತ್ಯತೆಯು ಸ್ವತಹ ಕಂಡುಬರುತ್ತದೆ. ನಾನಂತೂ ಸತ್ಯವನ್ನು ಸಿದ್ಧ ಮಾಡುತ್ತಿದ್ದೇನೆಂದು ಸಭ್ಯತೆಯನ್ನು ಬಿಟ್ಟುಹೋಗುವುದಲ್ಲ. ಹಾಗೆ ನೋಡಿದರೆ ನನಗೆ ಕ್ರೋಧವು ಬರುವುದಿಲ್ಲ ಆದರೆ ಯಾರಾದರೂ ಸುಳ್ಳು ಹೇಳುತ್ತಾರೆಂದರೆ ಕ್ರೋಧವು ಬಂದುಬಿಡುತ್ತದೆ ಎಂದು ಕೆಲವು ಮಕ್ಕಳು ಹೇಳುತ್ತಾರೆ. ಅವರು ಸುಳ್ಳುಹೇಳಿದರು. ತಾವು ಕ್ರೋಧದಿಂದ ಮಾತನಾಡಿದಿರಿ ಅಂದಮೇಲೆ ಇಬ್ಬರಲ್ಲಿ ಯಾರದು ಸರಿ? ಸತ್ಯತೆಯನ್ನು ಸಿದ್ಧ ಮಾಡುವವರು ಸದಾ ಸಭ್ಯತೆಯನ್ನು ಹೊಂದಿರುತ್ತಾರೆ. ಕೆಲವರು ಚಾತುರ್ಯವನ್ನು ತೋರಿಸುತ್ತಾರೆ. ನಾವೇನೂ ಕ್ರೋಧ ಮಾಡುವುದಿಲ್ಲ ಆದರೆ ನಾವು ಮಾತನಾಡುವ ಮಾತೇ ಜೋರಾಗಿರುತ್ತದೆ. ನಮ್ಮ ಧ್ವನಿಯೇ ದೊಡ್ಡದಾಗಿದೆ ಎಂದು ಹೇಳುತ್ತಾರೆ. ವೈಜ್ಞಾನಿಕ ಸಾಧನಗಳಿಂದ ಧ್ವನಿಯನ್ನು ಕಡಿಮೆ ಹಾಗೂ ಹೆಚ್ಚು ಮಾಡಬಹುದು ಅಂದಮೇಲೆ ಶಾಂತಿಯ ಶಕ್ತಿಯಿಂದ ತಮ್ಮ ಧ್ವನಿಯ ಗತಿಯನ್ನು ಹೆಚ್ಚು ಅಥವಾ ಕಡಿಮೆ (ನಿಧಾನ)**

**ಮಾಡಿಕೊಳ್ಳಲು ಸಾಧ್ಯವಿಲ್ಲವೇ? ನಿಮಗಿಂತಲೂ ಈ ಟೇಪ್ ರೆಕಾರ್ಡರ್ ಮತ್ತು ಈ ಮೈಕ್ ಗಳೇ ಒಳ್ಳೆಯದಾಗಿದೆ. ಇದರಲ್ಲಾದರೂ ಧ್ವನಿಯನ್ನು ಹೆಚ್ಚುಕಡಿಮೆ ಮಾಡಬಹುದು ಅಂದಮೇಲೆ ಪರಿಶೀಲಿಸಿಕೊಳ್ಳಿರಿ- ಸತ್ಯತೆಯ ಜೊತೆಗೆ ಸಭ್ಯತೆಯೂ ಇದೆಯೇ? ಒಂದುವೇಳೆ ಸಭ್ಯತೆಯಿಲ್ಲದಿದ್ದರೆ ಸತ್ಯತೆಯಿರುವುದಿಲ್ಲ ಆದ್ದರಿಂದ ಪವಿತ್ರತೆಯ ರಾಯಲ್ಟಿಯು ಸದಾ ಪ್ರತ್ಯಕ್ಷರೂಪದಲ್ಲಿ ಕಂಡುಬರಲು ಅಂತರ್ಯದಲ್ಲಂತೂ ರಾಯಲ್ಟಿ ಇದೆ. ಅದು ಹೊರಗಡೆ ಕಾಣಿಸುವುದಿಲ್ಲ ಎಂದಲ್ಲ. ಒಂದುವೇಳೆ ಒಳಗೆ ರಾಯಲ್ಟಿ ಇರುವುದೇ ಆದರೆ ಅದು ಹೊರಗಡೆಯೂ ಅವಶ್ಯವಾಗಿ ಕಂಡುಬರುವುದು. ಸತ್ಯತೆಯ ರಾಯಲ್ಟಿಯನ್ನು ಯಾರೂ ಮುಚ್ಚಿಡಲು ಸಾಧ್ಯವಿಲ್ಲ. ಇದರಲ್ಲಿ ಗುಪ್ತವಾಗಿರುವುದಿಲ್ಲ. ಗುಪ್ತ ಪುರುಷಾರ್ಥಿಯಾಗಿದ್ದೇವೆ ಆದ್ದರಿಂದ ಗುಪ್ತವಾಗಿರುತ್ತೇವೆ ಎಂದು ಹೇಳುತ್ತಾರೆ ಆದರೆ ಹೇಗೆ ಸೂರ್ಯನನ್ನು ಯಾರೂ ಮುಚ್ಚಿಡಲು ಸಾಧ್ಯವಿಲ್ಲವೋ ಹಾಗೆಯೇ ಸತ್ಯತೆಯ ಸೂರ್ಯನನ್ನು ಯಾರೂ ಮುಚ್ಚಿಡಲು ಸಾಧ್ಯವಿಲ್ಲ. ಯಾವುದೇ ಕಾರಣವಾಗಲಿ, ಯಾವುದೇ ವ್ಯಕ್ತಿಯಾಗಲಿ ಬಂಧಿಸಿಡಲು ಸಾಧ್ಯವಿಲ್ಲ. ಸತ್ಯವು ಸದಾ ಸತ್ಯವೇ ಆಗಿರುತ್ತದೆ. ಸತ್ಯತೆಯ ಶಕ್ತಿಯು ಎಲ್ಲದಕ್ಕಿಂತ ಮಹಾನ್ ಆಗಿದೆ. ಸತ್ಯತೆಯನ್ನು ಸಿದ್ಧಮಾಡುವುದರಿಂದ ಸಿದ್ಧವಾಗುವುದಿಲ್ಲ. ಸತ್ಯತೆಯ ಶಕ್ತಿಗೆ ಸ್ವತಹ ಸಿದ್ಧವಾಗುವ ಸಿದ್ಧಿಯು ಪ್ರಾಪ್ತಿಯಾಗುತ್ತದೆ. ಸತ್ಯತೆಯನ್ನು ಒಂದುವೇಳೆ ಯಾರಾದರೂ ಸಿದ್ಧಮಾಡಲು ಬಯಸುವುದಾದರೆ ಆ ಸಿದ್ಧ ಮಾಡುವುದೇ ಜಿದ್ದು ಆಗಿಬಿಡುತ್ತದೆ ಆದ್ದರಿಂದ ಸತ್ಯತೆಯು ಸ್ವಯಂ ಸಿದ್ಧವಾಗುತ್ತದೆ. ಅದನ್ನು ಸಿದ್ಧ ಮಾಡುವ ಅವಶ್ಯಕತೆಯಿಲ್ಲ. ತಿಳಿಯಿತೇ? ಈ ತಪಸ್ಯಾವರ್ಷದಲ್ಲಿ ಏನನ್ನು ತೋರಿಸಬೇಕಾಗಿದೆ? ಪವಿತ್ರತೆಯ ವ್ಯಕ್ತಿತ್ವ ಮತ್ತು ಘನತೆ. ಒಳ್ಳೆಯದು.**

ದೇಶ-ವಿದೇಶದ ಕಡೆಯಿಂದ ಎಲ್ಲಾ ಮಕ್ಕಳ ಪತ್ರ. ನೆನಪು-ಪ್ರೀತಿ, ಸೇವೆ ಹಾಗೂ ಪುರುಷಾರ್ಥದ ಸಮಾಚಾರ ಮತ್ತು ಹೃದಯದ ವಾರ್ತಾಲಾಪ ಎಲ್ಲವೂ ಬಾಪ್‌ದಾದಾರವರ ಬಳಿ ತಲುಪುತ್ತಿದೆ ಹಾಗೂ ತಲುಪಿಬಿಟ್ಟಿದೆ. ಬಾಪ್‌ದಾದಾ ಎಲ್ಲಾ ಮಕ್ಕಳಿಗೆ ಹೆಸರುಸಹಿತವಾಗಿ ನೆನಪು-ಪ್ರೀತಿಯನ್ನು ಕೊಡುತ್ತಿದ್ದೇವೆ. ಪ್ರತಿಯೊಬ್ಬರೂ ತಿಳಿದುಕೊಳ್ಳಿರಿ ಮೊದಲು ನಮಗೆ ನೆನಪು-ಪ್ರೀತಿ ನೀಡಿದ್ದಾರೆಂದು ಏಕೆಂದರೆ ಬಾಪ್‌ದಾದಾ ನೆನಪು-ಪ್ರೀತಿಗೆ ಪ್ರತ್ಯುತ್ತರವನ್ನು ಅವ್ಯಕ್ತರೂಪದಿಂದಂತೂ ಅದೇ ಘಳಿಗೆಯಲ್ಲಿ ಕೊಟ್ಟುಬಿಡುತ್ತೇವೆ. ಆದರೂ ಸಾಕಾರವಿಧಿಯಿಂದ ಸ್ವಯಂ ಸಾಕಾರದಲ್ಲಿ ಪತ್ರ ಬರೆಯುತ್ತೀರಿ ಹಾಗೂ ನೆನಪು-ಪ್ರೀತಿಯನ್ನೂ ಕಳುಹಿಸುತ್ತಿರೆಂದರೆ ಬಾಪ್ ದಾದಾರವರೂ ಸಹ ಸಾಕಾರ ವಿಧಿಯ ಪ್ರಮಾಣ ಸಾಕಾರರೂಪದಲ್ಲಿಯೇ ಮರುಪಾವತಿಯಾಗಿ ನೆನಪು-ಪ್ರೀತಿಯನ್ನು ಕೊಡುತ್ತಿದ್ದೇವೆ. ಬಾಪ್‌ದಾದಾರವರಿಗೆ ಗೊತ್ತಿದೆ. ನಾಲ್ಕಾರುಕಡೆ ತಪಸ್ಸಿನ ಉಮ್ಮಂಗ-ಉತ್ಸಾಹ ಮತ್ತು ಮನಸ್ಸಿನ ವೈಬ್ರೇಷನ್ನಿನ ಮೂಲಕ ಸೇವೆಯು ಚೆನ್ನಾಗಿದೆ ಮತ್ತು ಚೆನ್ನಾಗಿರುವುದು. ಇನ್ನುಮುಂದೆ ಮತ್ತಷ್ಟು ಗುಹ್ಯ ರಹಸ್ಯಯುಕ್ತ ಮಾತುಗಳನ್ನು ಸನ್ಮುಖದಲ್ಲಿಟ್ಟುಕೊಂಡು ಪುರುಷಾರ್ಥವನ್ನೂ, ಸೇವೆಯನ್ನೂ ಮಹೀನ್ (ತೀವ್ರ) ಮತ್ತು ಮಹಾನ್ ಮಾಡಿಕೊಳ್ಳುತ್ತತ್ತಾ ನಡೆಯಿರಿ. ಎಲ್ಲಾ ಮಕ್ಕಳಿಗೆ ಅಂದರೆ ಯಾರು ಸುಖದಲ್ಲಿ ಕುಳಿತಿದ್ದಾರೆ ಹಾಗೂ ಆಕಾರಸ್ವರೂಪದಿಂದ ತಂದೆಯ ಸನ್ಮುಖದಲ್ಲಿದ್ದಾರೆ ಅಂದರೆ ಸರ್ವಸನ್ಮುಖಿ ಅರ್ಥಾತ್ ಸದಾ ಜೊತೆಯಿರುವವರು ನಯನಗಳಲ್ಲಿ, ಮುಖದಲ್ಲಿ, ಮನಸ್ಸಿನಲ್ಲಿ ಸದಾ ಮಕ್ಕಳಿಗೆ ತಂದೆಯಿರುತ್ತಾರೆ ಹಾಗೂ ತಂದೆಗೆ ಮಕ್ಕಳಿರುತ್ತೀರಿ.

**ಹೀಗೆ ಸದಾ ನೆನಪಿನಲ್ಲಿ ಸಮಾವೇಶವಾಗಿರುವ ಶ್ರೇಷ್ಠಾತ್ಮರು, ಸದಾ ಪವಿತ್ರತೆಯ ರಿಯಾಲಿಟಿ ಮತ್ತು ರಾಯಲ್ಟಿಯಲ್ಲಿರುವಂತಹ ಆತ್ಮರಿಗೆ ಸದಾ ಮನಸ್ಸಿನಿಂದ ಸಂಪನ್ನವಾಗಿರುವಂತಹ ಅತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ಪಾರ್ಟಿಗಳ ಜೊತೆ ಭೇಟಿ:**

ತಮ್ಮನ್ನು ನಾವು ಪದಮಾಪದಮ ಭಾಗ್ಯವಾನ್ ಆತ್ಮರೆಂದು ಅನುಭವ ಮಾಡುತ್ತೀರಾ! ಕಲ್ಪದಲ್ಲಿ ಇಷ್ಟು ಶ್ರೇಷ್ಠ ಭಾಗ್ಯ ಯಾವುದೇ ಆತ್ಮದಿಲ್ಲ. ಭಲೆ ಎಷ್ಟೇ ಪ್ರಸಿದ್ಧವಾಗಿರುವ ಆತ್ಮಗಳಾಗಿರಲಿ, ಆದರೆ ತಮ್ಮ ಭಾಗ್ಯದ ಮುಂದೆ ಅವರ ಭಾಗ್ಯ ಏನಾಗಿದೆ? ಅದಾಗಿದೆ ಅಲ್ಪಕಾಲದ ಭಾಗ್ಯ ಮತ್ತು ಬ್ರಾಹ್ಮಣ ಆತ್ಮರದು ಅವಿನಾಶಿ ಭಾಗ್ಯ. ಕೇವಲ ಈ ಒಂದು ಜನ್ಮದಲ್ಲ. ಜನ್ಮ- ಜನ್ಮಾಂತರದ್ದಾಗಿದೆ.

ತಂದೆಗೆ ಮಕ್ಕಳಾಗುವುದೆಂದರೆ ಭಾಗ್ಯದ ಆಸ್ತಿ ಅಧಿಕಾರದಲ್ಲಿ ಸಿಗುವುದು. ಅಂದಾಗ ಅಧಿಕಾರವಂತೂ ಸಿಕ್ಕಿ ಬಿಟ್ಟಿತಲ್ಲವೇ. ಮಕ್ಕಳೆಂದರೆ ಅಧಿಕಾರ, ಆಸ್ತಿ. ಅಧಿಕಾರದ ನಶೆಯಿದೆಯೇ ಅಥವಾ ಇಳಿಯುತ್ತದೆ & ಏರುತ್ತದೆಯೆ? ಅರ್ಧಕಲ್ಪವಂತೂ ಕೆಳಗಡೆ ಇಳಿಯುತ್ತಲೇ ಬಂದ್ದಿದ್ದೀರಿ. ಈಗ ಏನು ಮಾಡುವುದು? ನಡೆಯ ಬೇಕೆ, ಏರಬೇಕೆ ಅಥವಾ ಹಾರಬೇಕೆ? ಹಾರುವಂತಹ ವಸ್ತು, ಮಧ್ಯದಲ್ಲಿ ಎಂದೂ ನಿಲ್ಲುವುದಿಲ್ಲ. ನಿಂತರೆ ಕೆಳಗಡೆ ಬರುವುದು. ಸ್ವಲ್ಪ ಸಮಯಕ್ಕೆ ನಿಂತು ಮತ್ತೆ ಹಾರಿದರೆ, ಗುರಿಯನ್ನು ಹೇಗೆ ತಲುಪುವಿರಿ? ಇದಕ್ಕಾಗಿ ಹಾರುತ್ತಾ ಇರಿ. ಆದರೆ ಯಾರು ಸದಾ ಹಾರುತ್ತಿರುವಿರಿ? ಯಾರು ಹಗುರವಾಗಿರುತ್ತಾರೆಯೋ ಅವರು. ಹಗುರವಾಗಿದ್ದೀರಾ? ಅಥವಾ ತನುವಿನ, ಮನಸ್ಸಿನ, ಸಂಬಂಧದ ಹೊರೆಯಿದೆಯೇ ಒಂದುವೇಳೆ ಹೊರೆಯಿಲ್ಲವೆಂದರೆ ಏಕೆ ನಿಲ್ಲುತ್ತೀರಿ? ಹೊರೆಯಿರುವ ವಸ್ತು ಕೆಳಗಡೆ ಬರುತ್ತದೆ ಮತ್ತು ಹಗುರವಾಗಿರುವುದು ಸದಾ ಮೇಲಿರುತ್ತದೆ. ನಿವೆಲ್ಲರೂ ಡಬಲ್ ಲೈಟ್ ಆಗಿದ್ದೀರಲ್ಲವೇ?.

ರಿವೈಸ್ ಕೋರ್ಸ್ 11-12-1991.

***ಸತ್ಯತೆಯ ಸಭ್ಯತೆಯೇ ಸತ್ಯವಾದ ಘನತೆಯಾಗಿದೆ.***

ಕೆಲವು ಮಕ್ಕಳು ದ್ವಾಪರದಿಂದ ಕಟ್ಟು ಕಥೆಗಳು ಹಾಗೂ ಕಾಲ್ಪನಿಕ ಕಥೆಗಳನ್ನು ಕೇಳಿರುವ ಸಂಸ್ಕಾರವನ್ನು ಈ ಬ್ರಾಹ್ಮಣ ಜೀವನದಲ್ಲಿಯೂ ಇಮರ್ಜ್ ಮಾಡಿಕೊಳ್ಳುತ್ತಾರೆ. ಅಸತ್ಯ ಮಾತನ್ನು ಕೂಡ ಸಂಪೂರ್ಣ ಸತ್ಯವೆನ್ನುವಂತೆ ಮಾಡಿಬಿಡುತ್ತಾರೆ ಮತ್ತು ಸತ್ಯವನ್ನು ಅಸತ್ಯವೆಂದು ಸಿದ್ಧ ಮಾಡಿಬಿಡುತ್ತಾರೆ. ಒಳಗೊಂದು ಹೊರಗೊಂದು ಎಂದು ಇದಕ್ಕೆ ಹೇಳಲಾಗುತ್ತದೆ. ಅಂದಮೇಲೆ ಇದು ಸತ್ಯತೆಯಾಯಿತೇ? ಘನತೆ ಆಯಿತೇ? ಇಲ್ಲ ಅಲ್ಲವೇ. ಆದ್ದರಿಂದ ಪವಿತ್ರತೆಯ ರಾಯಲ್ಟಿ ಅರ್ಥಾತ್ ರಿಯಾಲಿಟಿ ಒಂದು ವೇಳೆ ಈ ಚಿಹ್ನೆ ಇಲ್ಲವೆಂದರೆ ಪವಿತ್ರತೆಯ ಘನತೆಯು ಇನ್ನೂ ಬಂದಿಲ್ಲ ಅಥವಾ ಪರ್ಸೆಂಟೇಜ್ ನಲ್ಲಿ ಬಂದಿದೆ ಸಂಪೂರ್ಣವಾಗಿಲ್ಲ ಎಂದು ತಿಳಿದುಕೊಳ್ಳಿರಿ. ಸತ್ಯತೆಯ ಇನ್ನೊಂದು ಚಿಹ್ನೆಯನ್ನು ಬಾಪ್‌ದಾದಾ ಸದಾ ತಿಳಿಸುತ್ತಲೇ ಇರುತ್ತಾರೆ ಸತ್ಯವಂತರು ಸದಾ ನರ್ತಿಸುತ್ತಾ ಖುಷಿಯಲ್ಲಿ ಇರುತ್ತಾರೆ. ಕೆಲವೊಮ್ಮೆ ಕಡಿಮೆ ಖುಷಿ ಕೆಲವೊಮ್ಮೆ ಹೆಚ್ಚು ಖುಷಿ ಎನ್ನುವಂತೆ ಇರುವುದಿಲ್ಲ ಪ್ರತಿ ದಿನ, ಪ್ರತಿ ಸಮಯ ಖುಷಿಯು ಮತ್ತಷ್ಟು ಹೆಚ್ಚುತ್ತಾ ಇರುತ್ತದೆ ಮತ್ತು ರಾಯಲ್ ಆತ್ಮರಲ್ಲಿ ಎಂದೂ ಯಾವುದೇ ಪ್ರಕಾರದ ಸ್ಥೂಲ ಅಥವಾ ಸೂಕ್ಷ್ಮವಿರಲಿ ಬೇಡುವ ಸಂಸ್ಕಾರವಿರುವುದಿಲ್ಲ ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಅನಾದಿ (ಆತ್ಮಿಕ ಸ್ವರೂಪ) ಆದಿ (ದೇವತಾ ಸ್ವರೂಪ) ಮತ್ತು ಪೂಜ್ಯ ಸ್ವರೂಪದಲ್ಲಿ ರಾಯಲ್ ಆಗಿ ಇದ್ದೇನೆ.

2. ನಾನು ಶ್ರೇಷ್ಠ ಕೀರ್ತಿ ಅರ್ಥಾಥ್ ಶ್ರೇಷ್ಠ ಪವಿತ್ರತೆಯ ಕೀರ್ತನೆಯನ್ನು ಪಡೆಯುವ ದೇವಾತ್ಮ & ಸಂಗಮ ಯುಗದ ಶಕ್ತಿ ಸ್ವರೂಪ.

3. ನಾನು ಮಾತಿನಲ್ಲಿ, ಕರ್ಮದಲ್ಲಿ, ಸಂಬಂಧ ಸಂಪರ್ಕದಲ್ಲಿ ಯಾವುದೇ ತೋರಿಕೆಯ ಭಾವನೆ ಇಲ್ಲದೆ ಸತ್ಯತೆಯಿಂದ ಇರುವ ಬಾಪ್‌ದಾದಾರವರ ಸಮಾನವಾದ ಸತ್ಯಂ ಶಿವಂ ಸುಂದರಂ ಸ್ವರೂಪ.

4. ನಾನು ಖುಷಿಯಿಂದ ನರ್ತನೆ ಮಾಡುತ್ತಾ ಅವಿನಾಶಿಯಾಗಿ ಮನಸ್ಸು & ಮುಖದಿಂದ ಹರ್ಷಿತವಾಗಿ ಇದ್ದೇನೆ.(ಸತ್ಯತೆಯ ಚಿಹ್ನೆ)

5. ನಾನು ಎಷ್ಟು ಪ್ರಿಯವಾಗಿ ಇರುತ್ತೇನೆಯೋ ಅಷ್ಟೇ ಅತೀತವಾಗಿ ಕೂಡ ಇರುವ ಸತ್ಯವಾದ ಮತ್ತು ಉನ್ನತವಾದ ಪ್ರೇಮ ಸ್ವರೂಪ.

6. ನಾನು ಬಾಹ್ಯವಾಗಿ ಮತ್ತು ಮನಸ್ಸಿನಿಂದ ಸಂಪನ್ನವಾಗಿ ಇದ್ದೇನೆ.

7. ನಾನು ಮನಸ್ಸಿನಿಂದ ಸದಾ ಎಲ್ಲವನ್ನು ಪಡೆದಿದ್ದೇನೆ ಎಲ್ಲವೂ ಪ್ರಾಪ್ತಿಯಾಯಿತು ಎಂದು ಹಾಡುತ್ತಾ ಇದ್ದೇನೆ.

8. ರಾಯಲ್ ಆತ್ಮನಾದ ನನ್ನಲ್ಲಿ ಬೇಡುವ ಸಂಸ್ಕಾರ ಅಂಶ ಮಾತ್ರವೂ ಇಲ್ಲ.

9. ನಾನು ಪವಿತ್ರತೆಯ ವ್ಯಕ್ತಿತ್ವ ಮತ್ತು ಪವಿತ್ರತೆಯ ಘನತೆಯನ್ನು ಪ್ರತ್ಯಕ್ಷ ಮಾಡಿರುವ ತಪಸ್ವಿರಾಜನು.

10. ನನ್ನ ಮಾತು, ನೋಟ, ಚಲನೆ, ಆಹಾರ ಪಾನೀಯಗಳು, ಏಳುವುದು, ಕುಳಿತುಕೊಳ್ಳುವುದು, ಪ್ರತಿಯೊಂದು ಕರ್ಮದಲ್ಲಿ ಸಭ್ಯತೆಯ ಸತ್ಯತೆ ಸ್ವತಹವಾಗಿ ಕಾಣಿಸಿರುವ ಸಭ್ಯತಾದೇವಿ.

11. ನಾನು ಸಭ್ಯತೆಯಿಂದ ಸತ್ಯತೆಯನ್ನು ಸಿದ್ಧ ಮಾಡಿದ್ದೇನೆ.

12. ನನ್ನ ಪವಿತ್ರತೆಯ ರಾಯಲ್ಟಿಯು ಸದಾ ಪ್ರತ್ಯಕ್ಷ ರೂಪದಲ್ಲಿ ಕಾಣಿಸುತ್ತಿದೆ.

13. ನಾನು ಬಾಪ್‌ದಾದಾ ಅವ್ಯಕ್ತ ರೂಪದಲ್ಲಿ ಕೊಡುವ ನೆನಪು ಪ್ರೀತಿಯನ್ನು ಆ ಸಮಯದಲ್ಲೇ ಸ್ವೀಕರಿಸಿದ್ದೇನೆ.